**ಓ ಎಸ್ ನಂಃ 799/2014**

**ಡಿ. ಡಬ್ಲ್ಯು ಃ 3**

**ದಿಃ 27.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಜಿ ಯು ವಕೀಲರಿಂದಃ**

ನಾವು 5 ಜನ ಅಣ್ಣ ತಮ್ಮಂದಿರು ಸೇರಿ ವಾದಿಯ ದಾವೆಗೆ ಪ್ರತಿವಾದ ಪತ್ರ ಸಲ್ಲಿಸಿದ್ದೇವೆ. ರಾಮಕೃಷ್ಣಯ್ಯ ಇವರು ಸಹ ವಾದಿಯ ದಾವೆಗೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ರಾಮಕೃಷ್ಣಯ್ಯ ಇವರ ಪ್ರತಿವಾದಪತ್ರವನ್ನು ನಾನು ಓದಿಲ್ಲ. ದಿನಾಂಕಃ 19.05.1947 ರಂದು ಹೊನ್ನಯ್ಯ ಅಲಿಯಾಸ್ ದೊಡ್ಡಹೊನ್ನಯ್ಯ ಬಿನ್ ಕೆಂಪಯ್ಯ ಇವರ ಹೆಸರಿನಲ್ಲಿ ಕ್ರಯಪತ್ರ ಆಗಿದೆ ಎಂದರೆ ಸಾಕ್ಷಿ ಹೆಸರು ತಪ್ಪು ಇರುತ್ತದೆ, ಆ ದಿನ ನಮ್ಮ ತಂದೆಯ ಹೆಸರಿನಲ್ಲಿ ಕ್ರಯಪತ್ರ ಆಗಿದೆ ಎಂದು ಹೇಳುತ್ತಾರೆ. ರಾಮಕೃಷ್ಣಯ್ಯ ಇವರ ಪ್ರತಿವಾದ ಪತ್ರದಲ್ಲಿ ಹೊನ್ನಯ್ಯ ಅಲಿಯಾಸ್ ಚಿಕ್ಕ ಹೊನ್ನಯ್ಯ ಕ್ರಯಪತ್ರ ಬರೆಸಿಕೊಂಡಿದ್ದಾರೆ ಎಂದು ಬರೆಯಿಸಿರುವುದು ಸರಿ ಇರುತ್ತದೆ. 1947 ರ ಕ್ರಯಪತ್ರದಲ್ಲಿ ಕೇವಲ ಹೊನ್ನಯ್ಯ ಎಂದು ಮಾತ್ರ ಇದೆ , ದೊಡ್ಡಹೊನ್ನಯ್ಯ ಅಥವಾ ಚಿಕ್ಕಹೊನ್ನಯ್ಯ ಎಂದು ಅದರಲ್ಲಿ ಬರೆದಿಲ್ಲ ಎಂದರೆ ಸರಿ. ನನ್ನ ಸಹೋದರರ ಪರವಾಗಿ ನಾನು ಸಾಕ್ಷಿ ಹೇಳುತ್ತಿದ್ದೇನೆ.

ಓ ಎಸ್ 247/2015 ಇದನ್ನು ನಾವು ಮತ್ತು ಚನ್ನಮ್ಮ ಸೇರಿ ಹಾಕಿದ್ದೇವು. ಆ ದಾವೆ ವಜಾ ಅಗಿದೆ ಎಂದರೆ ಸರಿ. ರಾಮಕೃಷ್ಣಯ್ಯ ಇವರ ಪ್ರತಿವಾದಪತ್ರದಲ್ಲಿ 1947 ರ ಕ್ರಯಪತ್ರದ ಪ್ರಕಾರ ಹೊನ್ನಯ್ಯ ಇವರು 8 ಎಕರೆ 13 ಗುಂಟೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ಬರೆಸಿರುವುದು ತಪ್ಪು ಇರುತ್ತದೆ. ನಮ್ಮ ತಂದೆ ಕ್ರಯಕ್ಕೆ ತೆಗೆದುಕೊಂಡಿದ್ದು 6 ಎಕರೆ 36 ವರೆ ಗುಂಟೆ ಆದರೆ ಸ್ವಾಧೀನದಲ್ಲಿ ಹೆಚ್ಚುವರಿಯಾಗಿ 2 ಎಕರೆ 5 ಗುಂಟೆ ಅನುಭವದ ಪ್ರಕಾರ ಹೆಚ್ಚುವರಿಯಾಗಿ ಸ್ವಾಧೀನದಲ್ಲಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಅದಕ್ಕೆ ಅಂದರೆ 2 ಎಕರೆ 5 ಗುಂಟೆಗೆ ಪ್ರತ್ಯೇಕವಾದ ಕ್ರಯಪತ್ರ ಇಲ್ಲ ಎಂದರೆ ಸರಿ.

ಸ.ನಂ. 46 ನ್ನು ಅಳತೆ ಮಾಡಿ ಪಹಣಿ ಪ್ರಕಾರ ಸ್ವಾಧೀನದಲ್ಲಿ ಇರುವವರನ್ನು ಗುರುತಿಸಿದ್ದಾರೆ. ಆ ಸರ್ವೆ ಸ್ಕೆಚ್ ನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸ.ನಂ 46/2 ನ್ನು ನಮ್ಮ ತಂದೆ ಕ್ರಯಕ್ಕೆ ತೆಗೆದುಕೂಂಡ ನಂತರ ಇದುವರೆಗೆ ಹದ್ದುಬಸ್ತು ಆಗಿಲ್ಲ ಎಂದರೆ ಸಾಕ್ಷಿ ನಮ್ಮ ಭೂಮಿಯನ್ನು ಮಾಡಿಸಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಕ್ರಯವಾದ ನಂತರ ಮರಿಹೊನ್ನಯ್ಯ ಮತ್ತು

ಚಿಕ್ಕಹೊನ್ನಯ್ಯ ನ ಮಕ್ಕಳು ಸ.ನಂ. 46/2 ರಲ್ಲಿ ಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಮರಿಹೊನ್ನಯ್ಯ ಇವರ ಭಾಗಕ್ಕೆ ಬಂದ 3 ಎಕರೆ 20 ಗುಂಟೆ ಸ್ವತ್ತನ್ನು ಅವರು ಮಾರೇಗೌಡ ಎಂಬುವವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಭಾಗದಲ್ಲಿ ಮಾತ್ರ ನಾವು ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕ : 27.07.1999 ರಂದು ನಮ್ಮ ತಾಯಿ ಲಕ್ಷ್ಮಮ್ಮ ಮತ್ತು ನಾವು ವ್ಯವಸ್ಥಾ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ವ್ಯವಸ್ಥಾ ಪತ್ರದಲ್ಲಿ 12 ಎಕರೆ ಜಮೀನನ್ನು ಸ.ನಂ. 46/2 ರಲ್ಲಿ ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವ್ಯವಸ್ಥಾ ಪತ್ರದ ಪ್ರಕಾರ ನಮ್ಮ ಹೆಸರಿನಲ್ಲಿ ಖಾತೆ ಆಗಿದೆ ಎಂದರೆ ಸರಿ. ವ್ಯವಸ್ಥಾ ಪತ್ರದಲ್ಲಿ ನಾವು ರೇವಣ್ಣ ಇವರಿಗೆ ಸೇರಿದ 6 ಎಕರೆ 36 ವರೆ ಗುಂಟೆ ಜಮೀನನ್ನು ಸೇರಿಸಿದ್ದೇವೆ ಎಂದರೆ ಸರಿಯಲ್ಲ. ರೇವಣ್ಣ ಇವರ ಜಮೀನನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಅವರ ಸ್ವತ್ತನ್ನು ಸೇರಿಸಿ ವ್ಯವಸ್ಥಾ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸ.ನಂ. 46/2 ರಲ್ಲಿ 3 ಎಕರೆ 20 ಗುಂಟೆಯನ್ನು ಹೊರತುಪಡಿಸಿ ಬಾಕಿ ಉಳಿದ 3 ಎಕರೆ 16 ಗುಂಟೆಗೆ ಮಾತ್ರ ನಾವು ಹಕ್ಕುದಾರರು ಎಂದರೆ ಸರಿಯಲ್ಲ. ವ್ಯವಸ್ಥಾ ಪತ್ರದಲ್ಲಿ ಹಾಕಿರುವ ಚೆಕ್ ಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಆ ಪ್ರಕಾರ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**